ಆ) ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದ್ದು ಶೀಘ್ರವೇ ತೀರ್ಮಾನ ತೆಗೆದುಕೊಳ್ಳಲಾಗುವುದು.

ಇ) ಉತ್ತರ ಕನ್ನಡ ಜಿಲ್ಲೆಯ 64 ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲು ಪ್ರಸ್ತಾವನೆಗಳು ಬಂದಿವೆ. ಹಾಗೂ ಇದಕ್ಕೆ ಉತ್ತರ ಕನ್ನಡ ಜಿಲ್ಲಾ ಪರಿಷತ್ತಿನಿಂದ ಸಹಮತಿಯನ್ನು ಕೊಡಲಾಗಿದೆ.

ಈ) ಹೊನ್ನಾವರ ಹಾಗೂ ಬಟ್ಕಳ ತಾಲ್ಲೂಕಿನಲ್ಲಿ ಮೇಲ್ದರ್ಜೆಗೇರಿಸಲು ಸೂಚಿಸುವ ರಸ್ತೆಗಳ ಪಟ್ಟಿ ಕೆಳಗಿನಂತಿದೆ.

| ರಸ್ತೆಯ ಹೆಸರು | ಉದ್ದ (ಕಿ.ಮೀ.) |
|---|---|
| ಸಾಲಕೋಡ-ದೊಡ್ಮನೆ ರಸ್ತೆ | 18.00 |
| ಮಂಕಿ-ಮನ್ನಿಗೆ-ಹೆಗ್ಗಾರ ರಸ್ತೆ | 8.00 |
| ಹೆಗ್ಗಾರ-ಮಾಗೇಡ-ನಗರಬಸ್ತಿಕೇರಿ ರಸ್ತೆ | 27.00 |
| ನೆವೇಗಾಂವದಿಂದ-ಹಳದಿಪೂರ ರಸ್ತೆ | 4.60 |
| ಇಡುಗುಂಡಿಯಿಂದ-ಬೆಳಕೂರ ರಸ್ತೆ | 5.60 |
| ಕರ್ಮಾ-ಹೊಸದ ರಸ್ತೆ ವಾಯಾ ಕೊಡ್ಲಗದ್ದೆ | 6.30 |
| ಧರ್ಮಶಾಲೆಯಿಂದ ಕೂಡತೊಕಡಾ ರಸ್ತೆ | 8.40 |
| <u>ಭಟ್ಕಳ ತಾಲ್ಲೂಕು</u> | |
| ಮಾವಳ್ಳಿ-ಗೋಳಿಕೊಂಟ್ಟೆ | |
| ಕೂಪ್ಪದಿಂದ ಜಿಲ್ಲಾ ಗಡಿಯವರೆಗೆ | 20.00 |
| ಕುಲಟಾವೆ-ಸರಪನಕಟ್ಟಾ ರಸ್ತೆ | |
| ವಾಯಾ ಕೋನಾರ | 10.40 |
| ರಾ.ಹೆ.17 ರಿಂದ ಮುರ್ಡೇಶ್ವರ | |
| ಹಾಗೂ ಕೈಕಿಣಿಗೆ ಬಾಯಪಾನು ರಸ್ತೆ | 4.40 |

**ವಿಟ್ಲ ವಿದ್ಯುತ್ ಸಬ್‌ಸ್ಟೇಷನ್ನಿನ ಬಗ್ಗೆ**

436 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ವಿಟ್ಲ ವಿದ್ಯುತ್‌ಸಬ್-ಸ್ಟೇಷನ್ನಿನ ಕೆಲಸ ನಿಧಾನಗತಿಯಿಂದ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ, ಕಾರಣಗಳೇನು?*

*ಆ) ಆದಷ್ಟು ತ್ವರಿತವಾಗಿ ಕೆಲಸ ಮುಗಿಸಲು ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಈ ಕಾರ್ಯಕ್ಕೆ ಬೇಕಾಗಿರುವ ಸಾಮಗ್ರಿ ಹಾಗೂ ಉಪಕರಣಗಳ ಸರಬರಾಜಿನಲ್ಲಿ ವಿಳಂಬವಾಗಿರುವುದರಿಂದ ಈ ಕೆಲಸ ನಿಧಾನವಾಗಿದೆ.

ಆ) ಅಗತ್ಯವಿರುವ ಸಾಮಗ್ರಿ ಹಾಗೂ ಉಪಕರಣಗಳನ್ನು ಆದಷ್ಟು ಶೀಘ್ರಗತಿಯಲ್ಲಿ ಸರಬರಾಜು ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಮತ್ತು ನಿರ್ಮಾಣದ ಕಾರ್ಯವನ್ನು ಚುರುಕುಗೊಳಿಸಲಾಗುವುದು.